ಆಗಲೇ ಇಲ್ಲ. ಈ ಕಾರ್ತಿಕೇಯನಲ್ಲಿ ನನ್ನ ರುದ್ರ ಇರಲಿಲ್ಲ. ಅವನ ಕಣ್ಣು ದಿಟ್ಟಿಸದೆಯೇ ಅತಿ ಶೀತಲ ಭಾವದಲ್ಲಿ ಕೈಚಾಚಿದ್ದೆ. ಅವನ ಮುಖದಲ್ಲಿ ಸಣ್ಣ ಪ್ರಶ್ನೆ. ನಂತರ ಇಬ್ಬರೇ ಸಿಕ್ಕಾಗಲೂ ಅದೇ ಅಂತರ ಕಾದುಕೊಂಡಿದ್ದೆ, ಅವನು ಮೊದಲು ತಮಾಷೆ ಎಂದುಕೊಂಡ, ಆಮೇಲೆ ಗೊಂದಲಗೊಂಡ, ನಂತರ ಸಿಟ್ಟಾದ, ಯಾಕೆ ಹೀಗೆ ಅಂದ. ಆದರೆ, ನಾನು ಮಾತ್ರ ಶಿಲೆಯಂತೆಯೇ ಇದ್ದುಬಿಟ್ಟೆ. ನನ್ನ ಕೆಲಸ ಮತ್ತು ನನ್ನ ಪ್ರೇಮ ಹೀಗೆ ಬೆರೆಯುವುದು ನನಗೆ ಬೇಕಿರಲಿಲ್ಲ. ಸಿಟ್ಟಾದ ಅವನು ಸಂಪೂರ್ಣವಾಗಿ ಪ್ರೊಫೆಷನಲ್ ಆಗಿಯೇ ಮಾತನಾಡಲು ಪ್ರಯತ್ನಿಸುತ್ತಿದ್ದ, ಆದರೆ ಮಾತುಗಳು ಕಹಿಯಾಗಿಯೇ ಬರುತ್ತಿದ್ದವು. ಪ್ರೀತಿಯ ವಿರುದ್ಧ ಪದ ದ್ವೇಷವೇ, ನಿರ್ಭಾವುಕತೆಯೆ? ನಾನಾದರೂ ಏನು ಮಾಡಬಹುದಿತ್ತು. ಇದು ನಾನು ಬಯಸಿ ಬಯಸಿ, ಜೀವನದ 18 ವರ್ಷಗಳನ್ನು ಕೊಟ್ಟ ವೃತ್ತಿ, ಉಹೂ ವೃತ್ತಿಯಷ್ಟೇ ಅಲ್ಲ, ಪ್ರವಾಸಗಳಿಗಾಗಿ ಜಾಗ ಹುಡುಕುವುದು, ಅಲ್ಲಿ ಅಲೆಯುವುದು, ಅಲ್ಲಿನ ವಿಶೇಷಗಳನ್ನು ಜರಡಿ ಹಿಡಿಯುವುದು, ಅದನ್ನು ಪ್ರವಾಸ ಹೋಗುವವರ ಉದ್ದೇಶ, ವಯೋಮಾನ, ಬಜೆಟ್‌ಗೆ ಸರಿಯಾಗಿ ಹೊಂದಿಸುವುದು, ಕಸ್ಟಮೈಸ್ಡ್ ಪ್ರವಾಸಗಳ ಆಯೋಜನೆ ಇವೆಲ್ಲಾ ನಾನು ಪ್ರೀತಿಸಿ ಮಾಡುವ ಕೆಲಸ. ಇನ್ನು ಇವನೋ, ಬದುಕಿನ ನಿರ್ವಾತದಲ್ಲಿ ಹುಟ್ಟಿ ಬಂದ ಕೋಮಲ ಗಾಂಧಾರ. ಇವನೊಂದಿಗಿನ ಒಂದು ಭೇಟಿ ನನ್ನನ್ನು ಮುಂದಿನ ಆರು ತಿಂಗಳುಗಳ ಕಾಲ ಬದುಕಿಸುತ್ತದೆ. ಬದುಕಿನ ಎಲ್ಲಾ ಹೋರಾಟ ಹೊಡೆದಾಟಗಳಲ್ಲೂ, ಖಾಲಿತನದಲ್ಲೂ ಮೊಬೈಲ್‌ನಲ್ಲಿ ಮಾರ್ಕ್ ಮಾಡಿಟ್ಟಿದ್ದ ಆ ಒಂದು ದಿನಾಂಕ ನನ್ನನ್ನು ಪೊರೆಯುತ್ತದೆ. ನಮ್ಮಿಬ್ಬರ ನಡುವೆ ಆರು ತಿಂಗಳಿಗೊಮ್ಮೆ ಅರಳುತ್ತಿದ್ದ ಆ ಬ್ರಹ್ಮಕಮಲದ ನಸುಗಂಪು ಸೊಂಪಿನಲ್ಲಿ ಇದ್ದದ್ದಾದರೂ ಏನು? ಅದು ಕೇವಲ ಮೈಗೆ ಸಂಬಂಧಿಸಿದ್ದಲ್ಲ, ಕೇವಲ ಮನಸ್ಸಿಗೆ ಸಂಬಂಧಿಸಿದ್ದೂ ಅಲ್ಲ. ಕೆಲವು ಸಂಬಂಧಗಳು ಹಾಗೆಯೇ, ಅದಕ್ಕೆ ಹೆಸರಿರುವುದಿಲ್ಲ, ಆದರೆ ಹೆಸರಿರುವ ಸಂಬಂಧಗಳಲ್ಲಿ ಇರುವುದಕ್ಕಿಂತ ಹೆಚ್ಚಿನದೇನೋ ಅದರಲ್ಲಿ ಇರುತ್ತದೆ. ಎಷ್ಟೋ ಸಲ ಅದರ ಇರುವಿಕೆಯೇ ಹೆಸರಿನ ಸಂಬಂಧಗಳನ್ನೂ ಸಹ್ಯವಾಗಿಸಿಬಿಡುತ್ತದೆ. ಆದರೆ, ಹಾಗೆಂದು ವೃತ್ತಿಜೀವನದಲ್ಲಿ ಇಷ್ಟು ವರ್ಷ ಸಂಪಾದಿಸಿದ್ದ ಘನತೆಯನ್ನು ಹೇಗೆ ಕಳೆದುಕೊಳ್ಳಲಿ. ನನ್ನ ದೈನಂದಿನ ಪ್ರಪಂಚದಲ್ಲಿ ಈ ಸಂಬಂಧವನ್ನು ಸ್ಪರ್ಶಿಸಿದ ತಕ್ಷಣ ಇಬ್ಬರ ಬದುಕಿನ ಹಲವಾರು ಸಂಬಂಧಗಳು ಇಂದಲ್ಲ ನಾಳೆ ಸಮತೋಲನ ಕಳೆದುಕೊಳ್ಳುತ್ತವೆ. ಈ ಹೊಯ್ದಾಟ ನನ್ನನ್ನು ಒಳಗಿನಿಂದಲೇ ಕೊಚ್ಚಿಹಾಕುತ್ತಿತ್ತು, ನಾನು ಹೈರಾಣಾಗಿದ್ದೆ. ಅಂದು ಬೆಳಗ್ಗೆ ಹೋದವಳೆ ಆಫೀಸಿನಲ್ಲಿ ಕೆಲಸ ಬಿಡುತ್ತೇನೆ ಎಂದು ಪೇಪರ್ ಹಾಕಿದೆ... ವಿಷಯ ಗೊತ್ತಾಗಿ ಅವನ ಮುಖದಲ್ಲಿ ಅಸಮಾಧಾನ, ಗೊಂದಲ... 'Why?' ಎಂದಷ್ಟೇ ಕೇಳಿದ. ಏನೂ ಹೇಳದೆ ಭುಜ ಕುಣಿಸಿದೆ. ಕ್ಯಾಲೆಂಡರಿನಲ್ಲಿ ಸೆಪ್ಟೆಂಬರ್ ಹಾಳೆ ತೆಗೆದುಕೊಂಡಿತ್ತು.

ಈಗ ಮುಂದೆ? ಇಷ್ಟು ದಿನ ಕೆಲಸ ಮಾಡಿದ ಕಂಪನಿಯೊಂದಿಗಿನ ಕರುಳುಬಳ್ಳಿ ಕಡಿದುಕೊಳ್ಳುವುದು ಕಷ್ಟ, ಆದರೆ ಅಸಾಧ್ಯವಲ್ಲ. ಹೊಸ ಕೆಲಸ ಹುಡುಕುವುದು ವೃತ್ತಿಜೀವನದ ಈ ಹಂತದಲ್ಲಿ ಬೇರೆಯೇ ಚಾಲ್. ಕೆಲವು ಫೋನ್‌ಗಳು, ಹಾಯ್ ಹಲೋಗಳು. ಕಾಫಿ ಡೇಯ ಕ್ಯಾಶುಯಲ್ ಮಾತುಕತೆ. ಕೆಲಸ ಸಿಕ್ಕುವುದೊಂದು ಕಷ್ಟವಲ್ಲ. ಸಿಗುತ್ತದೆ, ಇಂದಲ್ಲ ನಾಳೆ. ಆದರೆ, ಈ ದಿನಗಳನ್ನು ನಮ್ಮಿಬ್ಬರ ಆ ಲೋಕ ತಡೆದುಕೊಳ್ಳುತ್ತದೆಯೆ? ಅದು ಪ್ರಶ್ನೆ. ಸೆಪ್ಟಂಬರ್ 14. ತಾಳ್ಮೆಯಿಂದ, ನೀಟಾಗಿ ಪ್ಯಾಕ್ ಮಾಡಿಕೊಂಡೆ. ಉಹೂ ಈಗಲೂ ಅವನಿಗೆ ಕರೆ ಮಾಡಿ ಯಾವುದೇ ಸಮಜಾಯಿಷಿ ಕೊಡಲಿಲ್ಲ. ಕೊಟ್ಟುಕೊಂಡ ಮಾತಿನಂತೆ ಮೌಂಟ್ ಅಬುನ ಅದೇ ಹೋಟೆಲಿನ, 1124 ಸಂಖ್ಯೆಯ ಕೋಣೆಗೆ ಹೋದೆ. 12.05, 12.10, 12.15, 12.17, 12.18, 12.18, 12.18... ಉಹೂ ಬರಲಿಲ್ಲ ಅವ. ಕೋಣೆಯ ಉದ್ದಗಲಕ್ಕೂ ಓಡಾಡುತ್ತಿದ್ದವಳು ಕುಸಿದಂತೆ ಕೂತೆ. 'ಬರವೊಲ್ಲ ಜಗಭಂಡ, ಇದು ಎಂಥಾ ಹಳವಂಡ, ತರವಲ್ಲ ಕಾಯಾಕ, ಮೈ ಮನಕ ಆಯಾಸ,' ಕಣ್ಣುಗಳು ಕೋಣೆಯ